## ಬೀಟಾ ತಲೆಮಾರು

ಮಿಲೇನಿಯಲ್ಸ್ ಮತ್ತು ಝಿಲೆನ್ನಿಯಲ್ಸ್ ಎಂದು ಗುರುತಿಸಿಕೊಂಡಿದ್ದ ಮಕ್ಕಳು ಈಗ ಹದಿಹರೆಯವನ್ನು ದಾಟಿ 2025ರಲ್ಲಿ ಪೋಷಕರಾಗುವ ವಯಸ್ಸನ್ನು ತಲುಪುತ್ತಿದ್ದಾರೆ. ಅಂದರೆ 2025ರಲ್ಲಿ ಬರಲಿರುವ ಹೊಸ ತಲೆಮಾರನ್ನು ಈ ಕಾಲದ ಭಾಷೆಯಲ್ಲಿ ಜನರೇಷನ್ ಬೀಟಾ ಎಂದು ಗುರುತಿಸಲಾಗುತ್ತದೆ. 2025–2039ರ ನಡುವೆ ಜನಿಸುವ ಮಕ್ಕಳು ಬೇರೆಯದೇ ವಿಭಿನ್ನ ಜಗತ್ತಿನಲ್ಲಿ ಬೆಳೆಯುತ್ತಾರೆ. ಮೊಬೈಲ್ ಇಲ್ಲದ ಜಗತ್ತು ಹೇಗಿತ್ತು ಎಂದು ಕಲ್ಪಿಸಿಕೊಳ್ಳುವ ಅವಕಾಶ ಅವರಿಗಿರುವುದಿಲ್ಲ. ಅಂದರೆ ಬೀಟಾ ಜನರೇಷನ್ ಮಕ್ಕಳ ಪೋಷಕರ ಮುಂದಿರುವ ಸವಾಲುಗಳೂ ವಿಭಿನ್ನವಾಗಿರುತ್ತವೆ. ಅವರಿಗೆ ಇರುವ ಅವಕಾಶಗಳೂ ಹೊಸದಾಗಿರುತ್ತವೆ. ಹೊಸ ಸವಾಲು ಮತ್ತು ಅವಕಾಶಗಳನ್ನು ಪೋಷಕರು ಹೇಗೆ ಸಂಭಾಳಿಸುತ್ತಾರೆ, ಅವುಗಳನ್ನು ಮಕ್ಕಳು ಹೇಗೆ ನಿಭಾಯಿಸುತ್ತಾರೆ ಎನ್ನುವುದು ಕುತೂಹಲಕಾರಿ ಅಂಶ.

ಇಷ್ಟರವರೆಗೆ ಜೆನ್‌ಝೀ (ಝಿಲೆನ್ನಿಯಲ್ಸ್) ತಲೆಮಾರು ತಂತ್ರಜ್ಞಾನದ ದಾಸರಾಗಿದ್ದಾರೆ ಎಂದು ಹಿರಿಯರು ಹಳಿಯುತ್ತಿದ್ದರೆ, ಇದೀಗ ಅದೇ ತಲೆಮಾರು ತಮ್ಮ ಮಕ್ಕಳ ಗ್ರಹಿಕೆಯನ್ನು ಗಮನಿಸುವುದು ಅನಿವಾರ್ಯವಾಗಿದೆ. ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಮತ್ತು ಜಾಗತಿಕ ತಾಪಮಾನ ಏರಿಕೆಯ ನಡುವೆ ಅಪಾರ ಸಾಧ್ಯತೆಗಳು ಮತ್ತು ಅಪಾಯಗಳ ನಡುವೆ ಜೀವಿಸಲು ಮಕ್ಕಳನ್ನು ಸಜ್ಜುಗೊಳಿಸಲು ಅವರಿಗೆ ಯಾವ ಪೂರ್ವ ಮಾದರಿಗಳೂ ಇಲ್ಲ. ಇಂತಹ ಸಂದರ್ಭದಲ್ಲಿ ಪಾಲನೆ ಪೋಷಣೆಯ ಸವಾಲುಗಳೇನು ಎಂದು ಈಗಲೇ ಹೇಳುವುದು ಸಾಧ್ಯವಾಗುವುದಿಲ್ಲ.

ಬೀಟಾ ಜನರೇಷನ್ ಕುರಿತು ಸಕಾರಾತ್ಮಕ ನಿರೀಕ್ಷೆಗಳನ್ನು ತಜ್ಞರು ವ್ಯಕ್ತಪಡಿಸುತ್ತಾರೆ. ಪರಿಸರಸ್ನೇಹಿ ಜೀವನದ ಮೌಲ್ಯವನ್ನು ಬೀಟಾ ತಲೆಮಾರು ಅರಿತಿರುತ್ತದೆ. ಆರ್ಟಿಫಿಷಿಯಲ್ ಇಂಟೆಲಿಜೆನ್ಸ್‌ನ ದೆಸೆಯಿಂದಾಗಿ ಶಿಕ್ಷಣವು ವೈಯಕ್ತಿಕವಾಗಿ ಅವರಿಗೆ ದೊರೆಯುತ್ತದೆ ಎಂಬ ನಿರೀಕ್ಷೆ ಇದೆ. ಮನಶಾಸ್ತ್ರಜ್ಞರ ಪ್ರಕಾರ ಬೀಟಾ ತಲೆಮಾರು ತಂತ್ರಜ್ಞಾನದ ಹೊಸ ಆವಿಷ್ಕಾರಗಳನ್ನು ಮಾಡುವ ಬದಲಿಗೆ, ತಂತ್ರಜ್ಞಾನ ಬಳಕೆಗೆ ಮಿತಿ ಹೇರಿಕೊಳ್ಳುವ ಒತ್ತಡವನ್ನು ಎದುರಿಸುತ್ತದೆ.

ಪೋಷಕರಂತೂ ಮಕ್ಕಳ ಮಾನಸಿಕ ಆರೋಗ್ಯ ಮತ್ತು ಭಾವನಾತ್ಮಕ ಅಗತ್ಯಗಳನ್ನು ನಿಭಾಯಿಸುವ ಕಲೆಯನ್ನು ಕಲಿಸುವ ವಿಧಾನಗಳಿಗಾಗಿ ತಡಕಾಡಬೇಕಾಗಬಹುದು. ಔಪಚಾರಿಕ ಶಿಕ್ಷಣ ವ್ಯವಸ್ಥೆಯು ಇಲ್ಲಿಯ ಯಾವುದೇ ಉಪಯೋಗಕ್ಕೆ ಬರುವುದಿಲ್ಲ.

ಇದೇ ವೇಳೆಗೆ ಕೌಟುಂಬಿಕ ವ್ಯವಸ್ಥೆಯು ದಿನೇ ದಿನೇ ಸಡಿಲಗೊಳ್ಳುತ್ತಿರುವ ಸಂದರ್ಭದಲ್ಲಿ ಭಾವನಾತ್ಮಕ ಆಸರೆಯನ್ನು ಪಡೆಯುವುದಕ್ಕಾಗಿ ಪೋಷಕರು ಬದಲಿ ವ್ಯವಸ್ಥೆಗಳನ್ನು ಕಂಡುಕೊಳ್ಳಬೇಕಾಗುತ್ತದೆ. ಈ ತಲೆಮಾರಿನ ಮಗುವೊಂದರ ಅಗತ್ಯಗಳನ್ನು ಅಮ್ಮನೊಬ್ಬಳೇ ಅಥವಾ ಅಪ್ಪ ಮಾತ್ರ ಪೂರೈಸುತ್ತ, ಸಾಕುವ ಸಂದರ್ಭದಲ್ಲಿ ಅಂತಹ ಏಕಾಂಗಿ ಪೋಷಕರಿಗೆ ಎದುರಾಗುವ ಸವಾಲುಗಳು ವಿಭಿನ್ನವಾದುದು. ಆರ್ಥಿಕವಾಗಿ ಸಬಲೀಕರಣವಾಗಿದ್ದರೆ ಬದುಕನ್ನು ನಿಭಾಯಿಸಿಬಿಡಬಹುದು ಎನ್ನುವ ವಿಶ್ವಾಸವು ದಿನೇ ದಿನೇ ಕುಂಠಿತವಾಗುತ್ತದೆ. ಎಲ್ಲರೂ ಜೊತೆಯಾಗಿ ಬಾಳುವ ಅಗತ್ಯಗಳು ಸ್ಪಷ್ಟವಾಗಿ ಗೋಚರಿಸುತ್ತಿರುವಾಗ ಪಾಲನೆ ಪೋಷಣೆಯ ಸ್ವರೂಪ ಯಾವ ರೀತಿ ಬದಲಾಗಬಹುದು ಎನ್ನುವುದನ್ನು ಕಾದು ನೋಡಬೇಕಿದೆ.

ದುಡಿಯುವ ಮಹಿಳೆಯು ಮಗುವಿಗಾಗಿ ಒಂದಷ್ಟು ವರ್ಷಗಳನ್ನು ಮೀಸಲಿಡಲೇಬೇಕಾಗಿದೆ.

ಎರಡನೇ ಮತ್ತು ಮೂರನೇ ಮಗುವನ್ನು ಪಡೆಯುವ ನಿರ್ಧಾರ ಮಾಡುವುದಾದರೆ ಹೆಣ್ಣು ಮತ್ತಷ್ಟು ರಾಜಿಗೆ ಸಿದ್ಧವಾಗಬೇಕಾಗುತ್ತದೆ ಮತ್ತು ವೃತ್ತಿಸಂಬಂಧ ಮಹತ್ವಾಕಾಂಕ್ಷೆ, ಕನಸುಗಳನ್ನು ಒತ್ತಟ್ಟಿಗಿಡಬೇಕಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಗೌರವಪೂರ್ವಕವಾದ ಕೌಟುಂಬಿಕ ಜೀವನ ರೂಪಿಸಲು ಪುರುಷರು ಬದ್ಧರಾಗಿರುತ್ತಾರೆಯೇ? ‘ನಾನು ದುಡಿದು ತಂದು ಹಾಕಿದ್ದನ್ನು ಬೇಯಿಸಿ ಹಾಕಿದರೆ ಸಾಕು’ ಎನ್ನುವ ಭಾವನೆಯನ್ನು ಹೋಗಲಾಡಿಸಲು ಯಾವುದಾದರೂ ಪ್ರಯತ್ನಗಳು ನಡೆದಿವೆಯೆ? ಈ ಪ್ರಶ್ನೆಗಳಿಗೆ ಧನಾತ್ಮಕ ಉತ್ತರ ದೊರೆಯುವ ಯಾವುದೇ ವಿಶ್ವಾಸ ಇಲ್ಲದೇ ಇರುವ ಕಾರಣಕ್ಕಾಗಿಯೇ ಇಂದು ಹೆಣ್ಣು ಹೆತ್ತವರೆಲ್ಲರೂ ತಮ್ಮ ಮಗಳು ಸ್ವಂತ ಕಾಲಮೇಲೆ ನಿಲ್ಲುವಂತಾಗಲಿ, ಸ್ವಾಭಿಮಾನದಿಂದ ಬಾಳಲಿ ಎಂದು ಆಶಿಸುತ್ತಾರೆ. ‘ಮಗಳು ಸ್ವಾಭಿಮಾನದಿಂದ ಬಾಳಲಿ’ ಎನ್ನುವ ಆಶಯದಲ್ಲಿಯೂ, ‘ಒಂದು ಮಗುವಿನ ರಾಜಿ’ಯೂ ಅಡಗಿಕೊಂಡಿರುತ್ತದೆ.

## ಏಕಾಂಗಿ ಪೋಷಕರ ಸಂಕಟ

ವಿವಾಹದ ಪರಿಕಲ್ಪನೆ ಇತ್ತೀಚಿನ ವರ್ಷಗಳಲ್ಲಿ ಸಾಕಷ್ಟು ಬದಲಾಗಿದೆಯಷ್ಟೆ. ಅಹಿತಕರ ಸಂಬಂಧದೊಳಗೆ ಬಂಧಿಯಾಗಿ ಇದ್ದುಕೊಂಡು ಏಗುವುದಕ್ಕಿಂತ ಸ್ವತಂತ್ರವಾಗಿ ಜೀವನ ನಡೆಸುವುದು ಮೇಲು ಎಂದು ಗಂಡು ಅಥವಾ ಹೆಣ್ಣು ಯೋಚಿಸುವುದು ಸಾಧ್ಯವಾಗಿದೆ. ಇದರ ಪರಿಣಾಮ, ಬಹುತೇಕ ಸಂದರ್ಭಗಳಲ್ಲಿ ‘ಏಕಾಂಗಿ ಪೋಷಕ’ (ಸಿಂಗಲ್ ಪೇರೆಂಟ್) ಹೆಚ್ಚಾಗಿ ಮಹಿಳೆಯರೇ ಆಗಿರುತ್ತದೆ. ಇಂತಹ ಮಹಿಳೆಯರು ಮದರ್‌ಹುಡ್ ಪೆನಾಲ್ಟಿಯನ್ನು ಮತ್ತಷ್ಟು ಕಠಿಣವಾಗಿ ಎದುರಿಸಲೇಬೇಕಾಗಿದೆ.

ಬ್ಯಾಂಕ್ ಉದ್ಯೋಗಿಯಾಗಿರುವ ಶಶಿರೇಖಾ ಅವರ ಅನುಭವ ಕೇಳಿ: ‘ನಾನೇ ಅಮ್ಮ ನಾನೇ ಅಪ್ಪನಾಗಿ ನನ್ನ ಮಗಳನ್ನು ನೋಡಿಕೊಳ್ಳುತ್ತಿದ್ದೇನೆ. ಬ್ಯಾಂಕ್ ಉದ್ಯೋಗ ಇರುವುದರಿಂದ ನಾನು ಇತರರೆಡೆಗೆ ಕೈ ಚಾಚದೇ ಸ್ವಾಭಿಮಾನದಿಂದ ಜೀವನ ಸಾಗಿಸುವುದು ಸಾಧ್ಯವಾಗಿದೆ. ಆದರೆ ನನ್ನ ಇತರ ಸಹೋದ್ಯೋಗಿಗಳಂತೆ ವೃತ್ತಿಯಲ್ಲಿ ಮೇಲೇರುವ ಅವಕಾಶಗಳು ಸಿಕ್ಕಾಗ ಅದನ್ನು ಬಳಸಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಒಂದುವೇಳೆ ಹಾಗೆ ಮುನ್ನುಗ್ಗಿ ಕೆಲಸ ಮಾಡುವ ಅವಕಾಶವು ನನಗೆ ದೊರೆತಿದ್ದರೆ ಇಷ್ಟೊತ್ತಿಗೆ ನಾನು ಬ್ಯಾಂಕ್ ಮ್ಯಾನೇಜರ್ ಆಗಿ ಬಡ್ತಿ ಹೊಂದಬೇಕಾಗಿತ್ತು. ಲಾಸ್‌ಆಫ್ ಪೇ ರಜೆ, ಬಡ್ತಿಯ ನಿರಾಕರಣೆಯ ದೆಸೆಯಿಂದಾಗಿ ನಾನು ವೃತ್ತಿಯಲ್ಲಿ ಹಿನ್ನಡೆ ಅನುಭವಿಸುವುದು ಅನಿವಾರ್ಯವಾಗಿತ್ತು. ಒಬ್ಬಳು ಮಗಳನ್ನು ಬೆಳೆಸಿ ಈ ಸಮಾಜದ ಸತ್ಪ್ರಜೆಯನ್ನಾಗಿ ಮಾಡುವ ಕಾಯಕಕ್ಕೆ ನಾನು ಈ ತ್ಯಾಗ ಮಾಡಬೇಕಾಗಿದೆ’. ಶಶಿರೇಖಾ ಅವರ ಅನುಭವ ಬಹುತೇಕ ಏಕಾಂಗಿ ಪೋಷಕರದೂ ಆಗಿರುತ್ತದೆ.

ಒಂಟಿಯಾಗಿ ಮಗುವನ್ನು ನಿಭಾಯಿಸುವುದರಿಂದ ಅನುಭವಿಸಬೇಕಾದ ಹಿನ್ನಡೆಯು ಸಾಮಾಜಿಕವಾಗಿ ಮಹಿಳೆಯ ಆತ್ಮವಿಶ್ವಾಸವನ್ನು ಕುಗ್ಗಿಸುತ್ತದೆ. ತನ್ನ ನಂತರ ವೃತ್ತಿ ಓಟದಲ್ಲಿ ಜೊತೆಯಾದವರು ಮುಂದೆ ಹೋಗುವುದನ್ನು ಆಕೆ ಮೌನವಾಗಿ ನೋಡಲೇಬೇಕಾಗಿದೆ; ಹೆಚ್ಚಿನ ಜವಾಬ್ದಾರಿಯ ಹುದ್ದೆಗಳನ್ನು ಬಿಟ್ಟುಕೊಟ್ಟು ‘ತಾಯಿ’ಯ ಪಾತ್ರಕ್ಕೆ ಹೆಚ್ಚಿನ ಅವಕಾಶ ನೀಡುವ ಅನಿವಾರ್ಯತೆ ಆಕೆಯದು.

ಮಗುವನ್ನು ಮಾಡಿಕೊಳ್ಳುವುದು ಹಾಗೂ ಆ ಮಗುವನ್ನು ಬೆಳೆಸಿ ಉತ್ತಮ ನಾಗರಿಕನನ್ನಾಗಿ ಮಾಡುವಲ್ಲಿ ಹೆಣ್ಣಿನ ಪಾತ್ರವೇ ಮುಖ್ಯವಾಗಿರುತ್ತದೆ. ಮಗುವಿಗೆ ಜನ್ಮ ನೀಡುವುದು ಹಾಗೂ ಲಾಲನೆ ಪೋಷಣೆ ಮಾಡುವುದರಲ್ಲಿ ಗಂಡು ನಿಮಿತ್ತ ಮಾತ್ರವೇ ಆಗಿರುತ್ತಾನೆ. ಹೆಣ್ಣಿನ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುವ ‘ಮಾತೃತ್ವ’, ಆಕೆಯನ್ನು ಮನೆಯ ಚೌಕಟ್ಟಿನೊಳಗೇ ಕೂರಿಸಲು ಹವಣಿಸುತ್ತದೆ. ಇಷ್ಟಾದರೂ ಹೆಣ್ಣು ತಾಯ್ತನವನ್ನು ತನ್ನ ಜೀವನದ ಅಪೂರ್ವ ಅನುಭವವೆಂದು ಭಾವಿಸುತ್ತಾಳೆ ಹಾಗೂ ಆ ಜವಾಬ್ದಾರಿಯನ್ನು ಹೊಣೆಗಾರಿಕೆಯಿಂದ ನಿರ್ವಹಿಸುತ್ತಿದ್ದಾಳೆ. ಈ ಹೊಣೆಗಾರಿಕೆಯಲ್ಲಿ ಗಂಡೂ ಜೊತೆಯಾದಲ್ಲಿ, ಹೆಣ್ಣಿನ ಜೀವನ ಒಂದಷ್ಟು ಸಹನೀಯ ಆಗುತ್ತದಲ್ಲವೇ? ಹಡೆಯುವುದಂತೂ ಗಂಡಿಗೆ ಸಾಧ್ಯವಿಲ್ಲ; ಮಗುವನ್ನು ಬೆಳೆಸುವುದರಲ್ಲೂ ನೇಪಥ್ಯದಲ್ಲಿ ಉಳಿಯಬಾರದಲ್ಲವೇ?

**ಪ್ರತಿಕ್ರಿಯಿಸಿ: feedback@sudha.co.in**